ನಾನು ತಿಳಿದುಕೊಂಡಿದ್ದೇನೆ. ಆದರೂ ಕೂಡ ಅವರು ಕೆಲಸವನ್ನು ಪೂರ್ಣಗೊಳಿಸಿಲ್ಲ. ಇದಕ್ಕೆ ಕಾರಣ ಎನು? ಇದನ್ನು ರೈತರಿಗೆ ಯಾವಾಗ ಬಿಟ್ಟುಕೊಡುತ್ತೀರಿ? ಒಂದು ತಿಂಗಳಲ್ಲಿ ಬಿಟ್ಟುಕೊಡುವುದಕ್ಕೆ ಆಗುವುದಿಲ್ಲ. ನಿಮ್ಮ ಕೈಯಿಂದ ತಪ್ಪು ಉತ್ತರ ಕೊಡಿಸುತ್ತಿದ್ದಾರೆ. ಈಗಾಗಲೇ ಅವರಿಗೆ ಹಣ ಪಾವತಿ ಆಗಿದೆ. ಅವರು ಹಣ ತೆಗೆದುಕೊಂಡಿದ್ದಾರೆ. ಆದರೆ, ಅವರು ಏತಕ್ಕೋಸ್ಕರ ಕೆಲಸ ಮಾಡುತ್ತಿಲ್ಲ ಎಂಬ ಬಗ್ಗೆ ಹೇಳಬೇಕು.

**ಶ್ರೀ ಉಮೇಶ್ ವಿ. ಕತ್ತಿ :** ಮಾನ್ಯ ಸಭಾಧ್ಯಕ್ಷರೆ, 100 ಹೋಬಳಿಗಳಲ್ಲಿ ಒಟ್ಟು 100 ರೈತ ಸಂಪರ್ಕ ಕೇಂದ್ರ ಕಟ್ಟಡವನ್ನು ಕಟ್ಟುತ್ತಿದ್ದೇವೆ. ಒಂದು ತಿಂಗಳಲ್ಲಿ ಕಟ್ಟಡವನ್ನು ಮುಗಿಸಿ ಮಾನ್ಯ ಶಾಸಕರನ್ನು ಕರೆದುಕೊಂಡು ಹೋಗಿ ಉದ್ಘಾಟನೆ ಮಾಡಬೇಕೆಂಬುದು ನನಗೆ ಆಸೆ ಇದೆ. ಆದರೆ, ಕೆಲಸ ಆಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆದ್ದರಿಂದ, ನನ್ನ ಜೊತೆಯಲ್ಲಿ ನಿಮ್ಮನ್ನು ಕರೆದುಕೊಂಡು ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತೇನೆ. ಅಲ್ಲಿ ಏನು ಕೆಲಸ ಆಗಿದೆ ಎಂದು ನೋಡಿ ಅಲ್ಲಿ ಏನಾದರೂ ತೊಂದರೆ ಇದ್ದರೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

## ತಡೆಹಿಡಿಯಲಾದ ಪ್ರಶ್ನೆಗಳು

**ಅಧ್ಯಕ್ಷರು :** ಡಾ॥ ಬಗಲಿ ಸಾರ್ವಭೌಮ – ಸಾತಗೌಡರ ಪ್ರಶ್ನೆ ಇದೆ, ಅವರು ಇಲ್ಲ. ಮುಂದಿನ ಪ್ರಶ್ನೆ ಮಾನ್ಯ ಎಂ.ಟಿ. ಕೃಷ್ಣಪ್ಪನವರದು ಇದೆ, ಅವರೂ ಸಹ ಇಲ್ಲ. ಮುಂದಿನ ಪ್ರಶ್ನೆ ಮಾನ್ಯ ಎ.ಮಂಜು ಅವರದು.

## ರಸ್ತೆಯ ದುರಸ್ತಿ

**19 (135) ಶ್ರೀ ಮಂಜು ಎ. (ಅರಕಲಗೂಡು) :** ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಆರ್ಥಿಕ ಇಲಾಖೆಯಲ್ಲಿ ಇರುವ ಪ್ರತಿಯೊಂದು ವಿವಿಧ ವೃಂದಗಳಲ್ಲಿರುವ ಹುದ್ದೆಗಳ ಸಂಖ್ಯೆ (Cadre Strength) ಎಷ್ಟು; (ಗ್ರೂಪ್–ಎ,ಬಿ,ಸಿ ಮತ್ತು ಡಿ ಪ್ರತ್ಯೇಕವಾಗಿ ನೀಡುವುದು);

ಆ) ಕಳೆದ ವರ್ಷಗಳಲ್ಲಿ ಎಷ್ಟು ನೌಕರರುಗಳು ನಿವೃತ್ತಿ ಹೊಂದಿರುತ್ತಾರೆ; (ಸ್ವಯಂ ನಿವೃತ್ತಿ, ವಯೋಮಿತಿ ನಿವೃತ್ತಿ, ವಜಾಗೊಳ್ಳುವಿಕೆ ಸೇರಿದಂತೆ ವಿವರ ನೀಡುವುದು);

ಇ) ಕಳೆದ ವರ್ಷಗಳಲ್ಲಿ ಎಷ್ಟು ಸಿಬ್ಬಂದಿಗಳನ್ನು ಹೊಸದಾಗಿ ನೇಮಕ ಮಾಡಿಕೊಳ್ಳಲಾಗಿದೆ;

ಈ) ಎಲ್ಲಾ ಹಂತಗಳಲ್ಲಿ ಎಷ್ಟು ಲೆಕ್ಕಪರಿಶೋಧನೆ ಆಕ್ಷೇಪಣೆಗಳು ಇತ್ಯರ್ಥಕ್ಕೆ ಬಾಕಿ ಇವೆ?

**ಶ್ರೀ ಡಿ.ವಿ. ಸದಾನಂದ ಗೌಡ (ಮುಖ್ಯಮಂತ್ರಿಯವರು) :**

**ಅ) ಇಲಾಖಾವಾರು ವಿವರಗಳು ಕೆಳಕಂಡಂತಿದೆ.**

| ಇಲಾಖೆಗಳು | ಎ | ಬಿ | ಸಿ | ಡಿ | ಒಟ್ಟು |
|---|---|---|---|---|---|
| 1) ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ಇಲಾಖೆ | 04 | 34 | 217 | 38 | 293 |
| 2) ವಿಮಾ ಇಲಾಖೆ | 05 | 39 | 706 | 95 | 845 |
| 3) ಅಬಕಾರಿ ಇಲಾಖೆ | 127 | 106 | 4971 | 109 | 5313 |
| 4) ವಾಣಿಜ್ಯ ತೆರಿಗೆ ಇಲಾಖೆ | 496 | 523 | 5069 | 1172 | 7260 |
| 5) ರಾಜ್ಯ ಲೆಕ್ಕಪತ್ರ ಇಲಾಖೆ | 373 | 459 | 3427 | 64 | 4323 |
| 6) ಖಜಾನೆ ಇಲಾಖೆ | 43 | 300 | 2271 | 305 | 2919 |

ಆ)

| ಇಲಾಖೆಗಳು | | 2008-09 | 2009-10 | 2010-11 |
|---|---|---|---|---|
| 1) ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ-ಋಣ ಇಲಾಖೆ | ಸ್ವಯಂ ನಿವೃತ್ತಿ | 04 | – | 11 |
| | ವಯೋ ನಿವೃತ್ತಿ | – | – | – |
| | ವಜಾಗೊಳ್ಳುವಿಕೆ | – | – | – |
| 2) ವಿಮಾ ಇಲಾಖೆ | ಸ್ವಯಂ ನಿವೃತ್ತಿ | 04 | 06 | 04 |
| | ವಯೋ ನಿವೃತ್ತಿ | 15 | 01 | 32 |
| | ವಜಾಗೊಳ್ಳುವಿಕೆ | 03 | – | – |
| 3) ಅಬಕಾರಿ ಇಲಾಖೆ | ಸ್ವಯಂ ನಿವೃತ್ತಿ | – | 01 | 01 |
| | ವಯೋ ನಿವೃತ್ತಿ | ಲಭ್ಯವಿಲ್ಲ | 74 | 31 |
| | ವಜಾಗೊಳ್ಳುವಿಕೆ | – | – | – |
| 4) ವಾಣಿಜ್ಯ ತೆರಿಗೆ ಇಲಾಖೆ | ಸ್ವಯಂ ನಿವೃತ್ತಿ | 18 | 15 | 16 |
| | ವಯೋ ನಿವೃತ್ತಿ | 18 | – | 100 |
| | ವಜಾಗೊಳ್ಳುವಿಕೆ | 03 | 01 | 12 |
| 5) ರಾಜ್ಯ ಲೆಕ್ಕಪತ್ರ ಇಲಾಖೆ | ಸ್ವಯಂ ನಿವೃತ್ತಿ | 57 | 07 | 06 |
| | ವಯೋ ನಿವೃತ್ತಿ | 04 | 81 | 187 |

| | | | | |
|---|---|---|---|---|
| | ವಜಾಗೊಳ್ಳುವಿಕೆ | – | 01 | – |
| 6) ಖಜಾನೆ ಇಲಾಖೆ | ಸ್ವಯಂ ನಿವೃತ್ತಿ | – | – | – |
| | ವಯೋ ನಿವೃತ್ತಿ | 15 | 37 | 94 |
| | ವಜಾಗೊಳ್ಳುವಿಕೆ | – | – | – |

ಇ)

| ಇಲಾಖೆಗಳು | 2008–09 | 2009–10 | 2010–11 |
|---|---|---|---|
| 1) ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ಇಲಾಖೆ | 03 | 02 | 05 |
| 2) ವಿಮಾ ಇಲಾಖೆ | 10 | 23 | 19 |
| 3) ಅಬಕಾರಿ ಇಲಾಖೆ | -- | – | – |
| 4) ವಾಣಿಜ್ಯ ತೆರಿಗೆ ಇಲಾಖೆ | 16 | 10 | 07 |
| 5) ರಾಜ್ಯ ಲೆಕ್ಕಪತ್ರ ಇಲಾಖೆ | | 51 | 114 |
| 6) ಖಜಾನೆ ಇಲಾಖೆ | 202 | 46 | 12 |

ಈ)

| | |
|---|---|
| 1) ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ಇಲಾಖೆ | ಮಹಾಲೇಖಾಪಾಲರ 22 ಆಡಿಟ್ ಆಕ್ಷೇಪಣೆಗಳು ಹಾಗೂ ಒಂದು ಸಿಎಜಿ ಆಕ್ಷೇಪಣೆಯು ಇತ್ಯರ್ಥಕ್ಕಾಗಿ ಬಾಕಿ ಉಳಿದಿರುತ್ತವೆ. |
| 2) ವಿಮಾ ಇಲಾಖೆ | 18 |
| 3) ಅಬಕಾರಿ ಇಲಾಖೆ | 931 |
| 4) ವಾಣಿಜ್ಯ ತೆರಿಗೆ ಇಲಾಖೆ | 3871 |
| 5) ರಾಜ್ಯ ಲೆಕ್ಕಪತ್ರ ಇಲಾಖೆ | 02 |
| 6) ಖಜಾನೆ ಇಲಾಖೆ | 01 |

**ಶ್ರೀ ಎ. ಮಂಜು** : ಸನ್ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಆರ್ಥಿಕ ಇಲಾಖೆ ಮತ್ತು ಅವರ ವ್ಯಾಪ್ತಿಗೆ ಬರುವ ಅಬಕಾರಿ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ರಾಜ್ಯ ಲೆಕ್ಕಪತ್ರ ಇಲಾಖೆ, ವಿಮಾ ಇಲಾಖೆಗೆ ಸಂಬಂಧಪಟ್ಟಂತೆ ಮೂರು ಪ್ರಶ್ನೆಯನ್ನು ಕೇಳಿದ್ದೆ. ನಾನು ಕೇಳಿರುವ ಪ್ರಶ್ನೆಗಳಿಗೆ ಉತ್ತರವನ್ನು ಒದಗಿಸಿದ್ದಾರೆ. 2008–09ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಲ್ಲಿ ಲಭ್ಯವೇ ಇಲ್ಲವೆಂದು ಎರಡನೇ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಅಬಕಾರಿ ಇಲಾಖೆಯಲ್ಲಿ ಲಭ್ಯವೇ ಇಲ್ಲವೆಂದು ಹೇಳುವುದಾದರೆ, ಆ ಇಲಾಖೆ ಬಗ್ಗೆ ಏನು ಹೇಳುತ್ತಾರೆಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡಬೇಕು. ಎಲ್ಲಾ ಹಂತಗಳಲ್ಲಿ ಎಷ್ಟು ಲೆಕ್ಕಪರಿಶೋಧನೆ ಆಕ್ಷೇಪಣೆಗಳು ಇತ್ಯರ್ಥಕ್ಕೆ ಬಾಕಿ ಇವೆ ಎಂದು ಕೊನೆಯ ಪ್ರಶ್ನೆಯನ್ನು ಕೇಳಿದ್ದೇನೆ. ವಿಮಾ ಇಲಾಖೆಯಲ್ಲಿ 18, ಅಬಕಾರಿ ಇಲಾಖೆಯಲ್ಲಿ 931, ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 3871, ರಾಜ್ಯ ಲೆಕ್ಕಪತ್ರ ಇಲಾಖೆಯಲ್ಲಿ 2, ಖಜಾನೆ ಇಲಾಖೆಯಲ್ಲಿ 1 ಎಂದು ಹೇಳಿ ಉತ್ತರವನ್ನು ಒದಗಿಸಿದ್ದೀರಿ. 22 ಆಡಿಟ್ ಆಕ್ಷೇಪಣೆಗಳು ಮತ್ತು 1 ಸಿಎಜಿ ಆಕ್ಷೇಪಣೆಯು ಇತ್ಯರ್ಥಕ್ಕಾಗಿ ಬಾಕಿ ಉಳಿದಿರುತ್ತವೆ ಎಂದು ತಾವು ಉತ್ತರವನ್ನು ಕೊಟ್ಟಿದ್ದೀರಿ, ನಿಜ, ಬಾಕಿ ಇರುವುದರ ಬಗ್ಗೆ ಇಲ್ಲಿ ಉತ್ತರ ಕೊಟ್ಟಿರುವುದು. ಆದರೆ ಎಷ್ಟು ಜನರು ನಿವೃತ್ತಿಯಾಗುತ್ತಾರೆ, ಅವರಿಂದ ಬಾಕಿ ಬರಬೇಕಾಗಿರುವ ಹಣ ಎಷ್ಟು ಸಂದಾಯವಾಗುತ್ತದೆ, ಇತ್ಯರ್ಥವಾಗುವವರೆಗೆ ಅವರಲ್ಲಿರುವ ಸ್ಥಿರಾಸ್ತಿಗಳ ಬಗ್ಗೆ ಏನಾದರು ಕ್ರಮ ತೆಗೆದುಕೊಂಡಿದ್ದೀರಾ? ನಿವೃತ್ತಿಯಾದ ಮೇಲೆ ಅವರ ಹೆಂಡತಿಗೋ ಮಕ್ಕಳಿಗೋ ವರ್ಗಾವಣೆ ಮಾಡಿ ಹೋದರೆ ಸರ್ಕಾರಕ್ಕೆ ಬರುವ ಬಾಕಿ ಹಣವನ್ನು ಯಾವ ರೀತಿ ನೀವು ವಸೂಲ್ಮಾಡುತ್ತೀರಿ? ಇಲ್ಲಿ ಮಾಡಿರುವುದನ್ನು ನೋಡಿದರೆ ಅವರಿಗೆ ಟೈಂ ಕೊಟ್ಟು ಅವರಲ್ಲಿರುವ ಆಸ್ತಿಯನ್ನು ಅವರ ಮಕ್ಕಳು ಮರಿಗಳಿಗೆಲ್ಲಾ ವರ್ಗಾವಣೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುತ್ತಿದ್ದೀರಿ, ಇದಕ್ಕೆ ಸರ್ಕಾರ ಉತ್ತರ ಕೊಡಬೇಕೆಂದು ಕೇಳುತ್ತೇನೆ.

**ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ)** : ಅವರು 4 ಪ್ರಶ್ನೆಗಳನ್ನು ಕೇಳಿದ್ದಾರೆ. ಆರ್ಥಿಕ ಇಲಾಖೆಯಲ್ಲಿ ಎಷ್ಟು ವೃಂದಗಳಿವೆ, ಎಷ್ಟು ಜನ ನಿವೃತ್ತಿ ಹೊಂದಿದ್ದಾರೆ, ಎಷ್ಟು ಹೆಚ್ಚುವರಿ ಸಿಬ್ಬಂದಿಗಳನ್ನು ಹೊಸದಾಗಿ ನೇಮಕ ಮಾಡಿಕೊಳ್ಳಲಾಗಿದೆ, ಎಲ್ಲಾ ಹಂತಗಳಲ್ಲಿ ಎಷ್ಟು ಲೆಕ್ಕಪರಿಶೋಧನೆಗಳು

ಇತ್ಯರ್ಥಕ್ಕೆ ಬಾಕಿ ಇದ್ದಾವೆಂದು ಕೇಳಿದ್ದಾರೆ. ನಾವು ಬಹಳ ವಿವರವಾದ ಉತ್ತರವನ್ನು ಕೊಡಬೇಕಾಗಿದೆ. ಅದಕ್ಕೋಸ್ಕರ ಕಳೆದ ಸರಿ ಹೆಚ್ಚಿನ ಕಾಲಾವಕಾಶ ಬೇಕೆಂದು ಕೇಳಿದ್ದೆವು, ಇಲ್ಲ ಇವತ್ತು ಕೊಡಲೇಬೇಕೆಂದು ಕೇಳಿದ್ದಕ್ಕೆ ನಮ್ಮಲ್ಲಿ ಲಭ್ಯವಿರುವ ಇಷ್ಟು ಮಾಹಿತಿಯನ್ನು ಕೊಟ್ಟಿದ್ದೇವೆ.

ಈಗ ತಾವು ನಿವೃತ್ತಿಯಾದಾಗ, ಮೃತಪಟ್ಟರೆ ಎಲ್ಲಾ ಮಾಹಿತಿಗಳನ್ನು ಏನು ಕೇಳಿದ್ದೀರಿ, ಆ ಮಾಹಿತಿಗಳನ್ನು ಸಂಗ್ರಹ ಮಾಡಿ ತಂದು ಕೊಡುತ್ತೇವೆ.

**ಶ್ರೀ ಎ. ಮಂಜು** : ಮಾಹಿತಿಯನ್ನು ಕೊಡುತ್ತೀರಿ, ಅಕಸ್ಮಾತ್ ಮಧ್ಯದಲ್ಲಿ ಯಾರಾದರೂ ನಿವೃತ್ತಿಯಾದರೆ ಅವರಿಂದ ರಿಕವರಿ ಹೇಗೆ ಮಾಡುತ್ತೀರಿ? ಅದನ್ನು ಹೇಳಬೇಕಲ್ಲ? ನಮ್ಮ ಪ್ರಶ್ನೆ ಏನೆಂದರೆ, ಇಲ್ಲಿ ಮಾಡಿರುವುದು ನೂರಕ್ಕೆ ನೂರಷ್ಟು ತಪ್ಪು ಎನ್ನುವುದು ನಿಮ್ಮ ಗಮನಕ್ಕೂ ಬಂದಿದೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೂ ಪರ್ಸ್ಯೂ ಆಗಿದೆ, ನೀವು ಅವರಲ್ಲಿರುವ ಆಸ್ತಿಗಳ ಬಗ್ಗೆ ಕೂಡಲೇ ಒಂದು ಆದೇಶವನ್ನು ಹೊರಡಿಸಬೇಕು, ಅವರು ಯಾವುದೇ ತಮ್ಮ ಆಸ್ತಿಗಳನ್ನು ವರ್ಗಾವಣೆ, ಮತ್ತೊಂದು ಮಾಡಬಾರದೆನ್ನುವುದು ನನ್ನ ಕಳಕಳಿಯ ಮನವಿ.

**ಶ್ರೀ ಎಸ್. ಸುರೇಶ್ ಕುಮಾರ್** : ಅವರು ಏನು ಸಲಹೆ ಕೊಟ್ಟಿದ್ದಾರೆ ಅದು ಯೋಗ್ಯವಾದ ಸಲಹೆ, ಆದೇಶ ಹೊರಡಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

**ಅಧ್ಯಕ್ಷರು** : ಬಾಲಕೃಷ್ಣರವರೆ, ತಮ್ಮ ಪ್ರಶ್ನೆಗೆ ಸಮಯ ಕೇಳಿದ್ದಾರೆ.

**ಶ್ರೀ ಎಸ್. ಸುರೇಶ್ ಕುಮಾರ್** : ಬಾಲಕೃಷ್ಣರವರೆ, ಕಳೆದ ಸಾರಿ ಏನು ಪ್ರಶ್ನೆ ಕೇಳಿದ್ದಿರಿ, ಆ ಬಗ್ಗೆ ನಾವು ಸ್ವಲ್ಪ ಸಮಯವನ್ನು ಕೇಳಿದ್ದೇವೆ, ಇನ್ನಷ್ಟು ಮಾಹಿತಿ ಬರುವುದರಿಂದ, ಉತ್ತರವನ್ನು ನಿಮಗೆ ಒದಗಿಸಿಕೊಡುತ್ತೇವೆ.

**ಶ್ರೀ ಹೆಚ್.ಸಿ. ಬಾಲಕೃಷ್ಣ** : ಈಗ ಬರ ಬಂದಿದೆ, ಪ್ರತಿ ಕ್ಷೇತ್ರಕ್ಕೆ ನೀವು ರೂ.30 ಲಕ್ಷಗಳನ್ನು ಘೋಷಣೆ ಮಾಡಿದ್ದೀರಿ, ಈ ಹಣ ಬರೀ ಬೋರ್‌ವೆಲ್ ಗಳಿಗಾಗುತ್ತದೆ. ಈ ಪಂಪು, ಮೋಟರ್‌ಗೆ ಏನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಪ್ರಶ್ನೆಗೆ ಉತ್ತರ ಬಂದಿದ್ದರೆ ಕೇಳಬಹುದಿತ್ತು, ಉತ್ತರವೇ ಇಲ್ಲ.

**ಅಧ್ಯಕ್ಷರು** : ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ, ದಯವಿಟ್ಟು ಕುಳಿತುಕೊಳ್ಳುವುದು.

**ಶ್ರೀ ಎಸ್. ಸುರೇಶ್ ಕುಮಾರ್** : ತಮಗೆ ಉತ್ತರ ಒದಗಿಸುವಾಗ ಮಾಹಿತಿ ಒದಗಿಸಿಕೊಡಲಾಗುವುದು.